ಸರ್ಕಾರ ಬಂದು 9 ತಿಂಗಳುಗಳಾಯಿತು, ಇನ್ನು ಎಷ್ಟು ದಿವಸಗಳಲ್ಲಿ ಈ ಭೂ ನ್ಯಾಯ ಮಂಡಳಿಯನ್ನು ಪುನರ್ ರಚಿಸಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ : ಸಾಧ್ಯವಾದಷ್ಟು ಬೇಗ ಇದನ್ನು ಮಾಡಿ ಮುಗಿಸುತ್ತೇವೆ. ಇನ್ನು ಉಳಿದುಕೊಂಡಿರುವುದು ಬರೀ 16 ಕೇಸಗಳು.

ಶ್ರೀ ಜಗದೀಶ್ ಶೆಟ್ಟರ್ : ನನ್ನದು ಇನ್ನೊಂದು ಪ್ರಶ್ನೆ ಏನೆಂದರೆ ಇದಕ್ಕಿಂತ ಮೊದಲು ಒಂದು ವ್ಯವಸ್ಥೆ ಇತ್ತು. ಈ ಭೂ ನ್ಯಾಯ ಮಂಡಳಿಯ ಮೇಲೆ ಅಪೀಲ್ ಮಾಡಲು ಲ್ಯಾಂಡ್ ರಿಫಾರಂ ಅಪೀಲೇಟ್ ಟ್ರಿಬ್ಯೂನಲ್ ಇತ್ತು. ಆದರೆ ಇದು ಈಗ ಅಸ್ತಿತ್ವದಲ್ಲಿಲ್ಲ; ಇದರ ಬದಲಿ ಯಾವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ? ಅಥವಾ ಟೆನೆಂಟ್ಸ ಅಥವಾ ಲ್ಯಾಂಡ್ ಲಾರ್ಡ್ಸ್ ಹೈಕೋರ್ಟಿಗೆ ರಿಟ್ ಮಾಡಬೇಕೋ ಹೇಗೋ, ಅಥವಾ ಬದಲಿ ವ್ಯವಸ್ಥೆ ಏನಾದರೂ ಮಾಡಲಾಗಿದೆಯೋ ಏನೋ ಇದನ್ನು ಮಾನ್ಯ ಕಂದಾಯ ಸಚಿವರು ವಿವರಣೆಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಇರುವ ಪರಿಸ್ಥಿತಿಯ ಪ್ರಕಾರ ಕೋರ್ಟ್‌ಗೆ ಹೋಗಬೇಕಾಗುತ್ತದೆ. ಇದಕ್ಕೆ ಬದಲು ಒಂದು ಅಪಿಲೇಟ್ ಟ್ರಿಬ್ಯೂನಲ್ ಮಾಡಬೇಕೆಂದು ಹೇಳಿ, ಈಗಾಗಲೇ ಅಮೆಂಡ್‌ಮೆಂಟ್ ಎಲ್ಲಾ ಆಗಿದೆ. ಅದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ, ಇದು 4 ಇರಬೇಕೇ? 2 ಇರಬೇಕೇ? ಒಂದೇ ಇರಬೇಕೇ ಅದರ ಬಗ್ಗೆ ನಾವು ಯೋಚನೆಯನ್ನು ಮಾಡುತ್ತೇವೆ.

ರಸ್ತೆ ಸಾರಿಗೆ ಸಂಸ್ಥೆಯಿಂದ ಮೋಟಾರು ವಾಹನಗಳ ತೆರಿಗೆ

326 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಿ.ಟಿ.ಎಸ್. ಬಸ್ಸುಗಳಿಗೆ ಪಾವತಿ ಮಾಡುತ್ತಿರುವ ಆದಾಯದ ಮೇಲಿನ ಶೇಕಡಾವಾರು ಮೋಟಾರು ವಾಹನದ ತೆರಿಗೆ ಎಷ್ಟು?

ಆ) ಬಿ.ಟಿ.ಎಸ್. ಬಸ್ಸುಗಳಿಗೆ ಮೋಟಾರು ವಾಹನ ತೆರಿಗೆಯನ್ನು ಕಡಿಮೆ ಮಾಡುವ ಪ್ರಸ್ತಾವನೆ ಏನಾದರೂ ಇದೆಯೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಿ.ಟಿ.ಎಸ್. ವಿಭಾಗದಲ್ಲಿನ ಬಸ್ಸುಗಳಿಗೆ ಆದಾಯದ ಮೇಲೆ ಶೇ. 12 ರಷ್ಟು ಮೋಟಾರು ತೆರಿಗೆಯಾಗಿ ಪಾವತಿ ಮಾಡುತ್ತಿದೆ.

ಆ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಸಭಾಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಬಿ.ಟಿ.ಎಸ್. ವಿಭಾಗದಲ್ಲಿ ಬಸ್‌ಗಳ ಆದಾಯದ ಮೇಲೆ ಶೇಕಡ 12 ರಷ್ಟು ಮೋಟಾರ್ ತೆರಿಗೆಯನ್ನು ಪಾವತಿ

ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಮತ್ತು ಎರಡನೇ ಪ್ರಶ್ನೆ ಇದಕ್ಕೆ ಏನಾದರೂ ರಿಯಾಯಿತಿಯನ್ನು ಕೊಡುತ್ತೀರಾ ಅಥವಾ ಇಲ್ಲ ಅಂದರೆ ತೆರಿಗೆಯನ್ನು ಏನಾದರೂ ಕಡಿಮೆ ಮಾಡಿತ್ತೀರಾ ಅಂದಿದ್ದಕ್ಕೆ ಇಲ್ಲ ಎಂದಿದ್ದಾರೆ. ಈಗ ನನ್ನ ಒತ್ತಾಯ ಏನೆಂದರೆ ನೀವು ಕರ್ನಾಟಕ ರಾಜ್ಯದಲ್ಲಿ ಏನಾದರೂ ಮಾಡಿಕೊಳ್ಳಿ, ಆದರೆ ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸಗಳ ಮೇಲೆ ಇರತಕ್ಕಂತಹ ಏನು ಮೋಟಾರ್ ಟ್ಯಾಕ್ಸ ಹಾಕುತ್ತಿದ್ದೀರಿ ಅದನ್ನು ಪೂರ್ಣ ರಿಯಾಯಿತಿಯನ್ನು ಕೊಡಬೇಕೆಂದು ಕೇಳುತ್ತೇನೆ. ಯಾಕೆ ಕೇಳುತ್ತಿದ್ದೆನೆಂದರೆ ಈ ಬಿ.ಟಿ.ಎಸ್. ಬಸಗಳವರನ್ನು ಏನಾದರೂ ಒಂದು ಶೇಲ್ಟರ್ ಕಟ್ಟಿ ಎಂದರೆ ನೀವು ಏನಾದರೂ ಡೊನೇಷನ್ ಕೊಡಿ ಎಂದು ಕೇಳುತ್ತಾರೆ. ಏಕೆಂದರೆ ಬಿ.ಟಿ.ಎಸ್. ಸಂಸ್ಥೆ ಪೂರ್ಣ ನಷ್ಟದಲ್ಲಿದೆ. ಒಂದು ಶೆಲ್ಟರ್‌ನ್ನು ಕಟ್ಟಿಕೊಡುವುದಕ್ಕೆ ಅವರ ಕೈಯಲ್ಲಿ ಆಗುತ್ತಿಲ್ಲ. ನಾನೇ ನಮ್ಮಕ್ಷೇತ್ರದಲ್ಲಿ ನಾಲ್ಕು ಶೆಲ್ಟರ್‌ಗಳನ್ನು ಕಟ್ಟಿಸಿ ಕೊಟ್ಟಿದ್ದೇನೆ. ಯಾರಾದರೂ ಡೋನರ್ಸ್‌ಗಳನ್ನು ಕೊಡಿ ಶೆಲ್ಟರಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಾರೆ. ಕೊನೆಯ ಪಕ್ಷ ಈ ಟ್ಯಾಕ್ಸನ್ನಾದರೂ ತೆಗೆದು ಹಾಕಿದರೆ, ಆ ಹಣ ಜನರಿಗೆ ಅನುಕೂಲವಾಗುವ ಕಡೆ ಆ ಹಣವನ್ನು ಖರ್ಚು ಮಾಡಬಹುದು. ಆದ್ದರಿಂದ ಬೆಂಗಳೂರು ವಿಭಾಗಕ್ಕಾದರೂ ಈ ರಿಯಾಯಿತಿಯನ್ನು ಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

ಆಸ್ತಿ ಖರೀದಿಸುವಾಗ ನೋಂದಾಣಿ ಶುಲ್ಕದ ವಿವರ ಕುರಿತು

327 - ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನಲ್ಲಿ 1993-94 ಹಾಗೂ 1994-95ನೇ ಸಾಲಿನಲ್ಲಿ ಸಾರ್ವಜನಿಕರು ಆಸ್ತಿ ಖರೀದಿ ಮಾಡಿದ ಬಗ್ಗೆ ನೋಂದಣಿ ಅಧಿಕಾರಿಗಳು ನಿಗಧಿಪಡಿಸಿದ ನೋಂದಣಿ ಶುಲ್ಕ ಕಡಿಮೆ ಎಂದು ಮತ್ತೆ ನೋಂದಣಿ ಶುಲ್ಕವನ್ನು ಅತಿರೇಕವಾಗಿ ಹೆಚ್ಚಿನ ವಿತರಣೆ ಮಾಡಿದ್ದು, ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ :

ಅ) 1993-94 ಮತ್ತು 1994-95ನೇ ಸಾಲಿನಲ್ಲಿ ಕರ್ನಾಟಕಕ ಮುದ್ರಾಂಕ ಅಧಿನಿಯಮ 1957ರ ಕಲಂ - 45ಎ (1) ರಡಿಯಲ್ಲಿ ಕಡಿಮೆ ನೋಂದಣಿ ಶುಲ್ಕ ಪಾವತಿ ಮಾಡಿರುವ ಪ್ರಕರಣವನ್ನು ಹಾನಗಲ್ ಉಪ-ನೋಂದಣಾಧಿಕಾರಿಗಳು ಧಾರವಾಡ ಜಿಲ್ಲಾ - ನೋದಣಾಧಿಕಾರಿಗಳಿಗೆ ಉಲ್ಲೇಖಿಸಿದ್ದು, ಹಾಗೂ ಕಲಂ - 45 ಎ (3) ರಡಿಯಲ್ಲಿ ಜಿಲ್ಲಾ - ನೋಂದಣಾಧಿಕಾರಿಗಳು ಸ್ವಇಚ್ಛೆಯಿಂದ ಕಡಿಮೆ ನೋಂದಾಣಿ ಶುಲ್ಕ ಪಾವತಿ ಮಾಡಿರುವ ಪ್ರಕರಣಗಳನ್ನು ವಿಚಾರಣೆಗೆ ತೆಗೆದುಕೊಂಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 1993-94 ಮತ್ತು 1994-95ನೇ ಸಾಲಿನಲ್ಲಿ ಸಾರ್ವಜನಿಕರು ಆಸ್ತಿಯನ್ನು ಅಪಮೌಲ್ಯಗೊಳಿಸಿ ದಸ್ತಾವೇಜುಗಳನ್ನು ನೋಂದಾಯಿಸಿರುವ 170 ಪ್ರಕರಣಗಳನ್ನು ಸ್ವತ್ತಿನ ಮಾರುಕಟ್ಟೆ